**ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು ಹಾಗೂ ಜೆ.ಎಂ.ಎಫ್.ಸಿ. ಇವರ ನ್ಯಾಯಾಲಯ, ಮುಧೋಳ**

**ಸಾಕ್ಷಿಗೆ ಇಂದು ದಿನಾಂಕ 04.09.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ 1 ಎ ಮತ್ತು 1 ಬಿ, 2 ಮತ್ತು 3 ರವರ ಪರ ಶ್ರೀ ಬಿ ಹೆಚ್ ಆರ್ ವಕೀಲರಿಂದ :**

ನಾನು ಹಾಜರು ಪಡಿಸಿರುವ ನಿಪಿ 16 ರಿಂದ 22 ರ ದಾಖಲೆಗಳ ಬಗ್ಗೆ ನನಗೆ ಮಾಹಿತಿ ಇರುವುದು. ನಾನು ಹಾಜರು ಪಡಿಸಿರುವ ದಾಖಲೆಗಳಲ್ಲಿ ರುಕ್ಮಾಜಿ ಶೇರಖಾನೆ ಇವರ ಹೆಸರಿನಲ್ಲಿ ಡಿಕ್ರಿಯಾದ ಬಗ್ಗೆ ಯಾವುದೇ ದಾಖಲೆಗಳು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಹಾಜರು ಪಡಿಸಿರುವ ನಿಪಿ 16 ರಿಂದ 22 ರ ದಾಖಲೆಗಳಲ್ಲಿ ಮಲ್ಲುಬಾಯಿ ಶೇರಖಾನೆ ಇವರ ಹೆಸರು ದಾಖಲು ಇರುವುದಿಲ್ಲ ಎಂದರೆ ಸರಿಯಲ್ಲ.

2. ನಿಪಿ 22 ರ ದಾಖಲೆಯಲ್ಲಿ ವಾದ ಪತ್ರದಲ್ಲಿ ಹೇಳಿರುವಂತೆ 3 ಗುಂಟೆಯ ಜಮೀನು ನಿರ್ದಿಷ್ಟವಾಗಿ ತೋರಿಸಿರುವುದಿಲ್ಲ ಎಂದರೆ ಸರಿ. ನಿಪಿ 22 ರ ದಾಹಲೆಯಲ್ಲಿ ಮಲ್ಲುಬಾಯಿ ಶೇರಖಾನೆಗೆ ಸಂಬಂಧಪಟ್ಟಂತೆ 3ಗುಂಟೆಯ ಜಮೀನು ಇರುವುದು ಎಂದು ಕಾಣಿಸಿರುವುದಿಲ್ಲ ಎಂದರೆ ಸರಿ . ನಿಪಿ 22 ರ ಪಿಟಿ ಸಿಟಿ ನ ಪ್ರಕಾರ 3 ಎಕರೆಯ ಜಾಗವನ್ನು ಯಾರು ಅತಿಕ್ರಮನ ಮಾಡಿರುವರು ಎಂದು ನನಗೆ ನಿರ್ದಿಷ್ಟವಾಗಿ ಹೇಳಲು ಆಗುವುದಿಲ್ಲ. ನಾನು ಹಾಜರು ಪಡಿಸಿರುವ ನಿಪಿ 22 ರ ಪಿಟಿಸಿಟಿನ ದಾಖಲೆಯಲ್ಲಿ ನಮಗೆ ಸಂಬಂಧಪಟ್ಟಂತಹ ಯಾವುದೇ ಜಾಗ ಇರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಮಾಲೀಕತ್ವದ ಜಾಗೆ ಅಲ್ಲಿ ಇರದೇ ಇದ್ದರೂ ಸಹಿತ ಈ ಸುಳ್ಳು ದಾವೆಯನ್ನು ದಾಖಲು ಮಾಡಿದ್ದೇವೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ . ಹೇ. ಕೆ . ಸರಿ ಅದೆ.

VIJAYAKUMAR KANNUR
Digitally signed by VIJAYAKUMAR KANNUR
Date: 2025.09.06 10:42:05 +0530

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ